ನಮ್ಮಗಳೆಲ್ಲರ ಹೊಟ್ಟೆ ಉರಿಸುತ್ತಿತ್ತು...

ಎಲ್ಲಿ ಮಳೆಯಾಯಿತೋ ಏನೋ ಎನ್ನುವಂತೆ ಮಣ್ಣಿನ ವಾಸನೆಯ ಘಾಟು ನನ್ನವರೆಗೂ ಅಡರಿತು.

ನಾನು ಸುಟ್ಟುಹೋದ ನಂತರ ನನ್ನ ಸಂವೇದನಾಂಗಗಳೆಲ್ಲ ಮುರುಟು ಹೋಗಿದ್ದಾವೆಂದುಕೊಂಡಿದ್ದೆ. ಆದರೆ ಹಾಗೇನಾಗಿರಲಿಲ್ಲ. ಹೂವಿನ ವಾಸನೆ, ಮಣ್ಣಿನ ವಾಸನೆಯನ್ನೆಲ್ಲ ಗ್ರಹಿಸುತ್ತಿದ್ದೇನೆಂದರೆ, ನನ್ನಲ್ಲಿನ್ನೂ ಸಂವೇದನೆ ಉಳಿದುಕೊಂಡಿದೆ, ನಾನಿನ್ನೂ ಬದುಕಿದ್ದೇನೆಂದೇ ಅರ್ಥವಲ್ಲವೇ?

ಅಷ್ಟರಲ್ಲಿ ಕುದುರೆಗಳ ಖುರಪುಟ ಕೇಳಿ ಆತಂಕವಾಯಿತು. ಅಂದು ಆನೆಯನ್ನು ಹಿಡಿಯಲು ಬಂದಿದ್ದಂತಹ ಜನಗಳಿಗಿಂತ ಕುದುರೆಯ ಬೆನ್ನೇರಿ ಬಂದ ಈ ಜನ ಬಹಳ ಶಿಸ್ತುಬದ್ಧರಾಗಿದ್ದರು. ಎಲ್ಲರೂ ಒಂದೇ ರೀತಿಯ ಬಟ್ಟೆಗಳನ್ನು ತೊಟ್ಟಿದ್ದರು. ಬಹುಶಃ ಯಾವುದೋ ರಾಜನ ಕಡೆಯವರಿರಬೇಕು. ಯಾವುದೋ ಯಾಕೆ, ಈ ಪ್ರದೇಶದ ರಾಜನ ಕಡೆಯವರೇ ಆಗಿರಬೇಕು. ಬಂದವರಲ್ಲಿ ನೂರಾರು ಜನ ಒಣಗಿದ ಬರಚಲು ಗಿಡಗಳ ಬುಡಗಳನ್ನೇ ಕತ್ತರಿಸಿ ಪೊರಕೆಯಂತೆ ಮಾಡಿಕೊಂಡು, ಇನ್ನೂ ಉರಿಯುತ್ತಲೇ ಇದ್ದ ಕಾಡ್ಗಿಚ್ಚಿಗೆ ಹುಚ್ಚು ನಾಯಿಗೆ ಬಡಿಯುವಂತೆ ಬಡಿದು ಬಡಿದು ಬೆಂಕಿಯನ್ನು ಆರಿಸುತ್ತಿದ್ದರು. ಇನ್ನು ಕೆಲವರು ನದಿಯಿಂದ ಬಿಂದಿಗೆಯಲ್ಲಿ ನೀರನ್ನು ತುಂಬಿಕೊಂಡು ಹೋಗಿ ಸುರಿಸುರಿದು ಆರಿಸುತ್ತಿದ್ದರು.

ಇನ್ನೊಂದು ಗುಂಪು ನನ್ನ ಕಡೆಗೂ ಆಗಮಿಸಿತು. ಕಾಡಿಗೆ ಬೆಂಕಿ ಬಿದ್ದಿದ್ದರಿಂದ ಉಂಟಾಗಿರುವ ಹಾನಿಯ ಬಗ್ಗೆ ವರದಿ ಮಾಡಲು ಈ ನಾಡಿನ ಮಹಾರಾಜ ತನ್ನ ಅಧಿಕಾರಿಗಳನ್ನು ಕಳುಹಿಸಿದ್ದನಂತೆ. ಅವರು ಇಡೀ ಕಾಡನ್ನೆಲ್ಲ ಅಲೆದಾಡಿ ಪರಿಶೀಲಿಸಿದರು. ಅವರಲ್ಲಿ ಒಬ್ಬಾತ ತನ್ನ ತಲೆಯೆತ್ತಿ ನನ್ನ ಸುಳಿಯವರೆಗೆ ನೋಡಿ ಹೌಹಾರಿದ. 'ಅಯ್ಯೋ ದೇವರ ಮರವೂ ಸುಟ್ಟು ಹೋಗಿದೆ' ಎಂದ. ಎಲ್ಲರೂ ನನ್ನತ್ತ ತಿರುಗಿದರು. ಕೆಲವರು ಕಾಲ್ಲಿನ ಪಾದರಕ್ಷೆಗಳನ್ನು ಕಳಚಿ ನನ್ನ ಬೊಡ್ಡೆಗೆ ತಲೆಯಿಟ್ಟು ನಮಸ್ಕರಿಸಿದರು. ನಾನು ಯಾವ ಜಾತಿಯ ಮರವೆಂದಾಗಲೀ, ನನ್ನ ಮೌಲ್ಯವೇನೆಂದಾಗಲೀ ಅಲ್ಲಿಯವರೆಗೆ ನನಗೆ ತಿಳಿದಿರಲಿಲ್ಲ. ನಾನು ದೈವಾಂಶ ಸಂಭೂತ ವಂಶಕ್ಕೆ ಸೇರಿದ್ದೇನೆಂದು ತಿಳಿದಾದ ನಂತರ ನನಗೆ ಏನೋ ಒಂಥರ ಮೇಲರಿಮೆ ಬಂದಂತಾಯಿತು. ಅವರಲ್ಲಿ ಒಬ್ಬಾತ, 'ಇಂಥ ದಟ್ಟ ಕಾಡಿನಲ್ಲಿ ಅಶ್ವತ್ಥವೃಕ್ಷ ಹೇಗೆ ಹುಟ್ಟಿ ಬೆಳೆಯಿತೋ!' ಎಂದು ಆಶ್ಚರ್ಯ ವ್ಯಕ್ತಪಡಿಸಿದ. ಅಂದರೆ ನನ್ನದು ಅಶ್ವತ್ಥ ವೃಕ್ಷದ ಜಾತಿಯೆಂಬುದು ತಿಳಿಯಿತು. ಆಗಿನಿಂದಲೂ ಕಾಡಿನಲ್ಲಿ ನನ್ನಂಥ ವರ್ಗಕ್ಕೆ ಸೇರಿದ ಒಂದೂ ಮರವಿಲ್ಲವಲ್ಲ ಎಂದು ಸಂಶಯಪಡುತ್ತಿದ್ದುದಕ್ಕೆ ಅನುಸಾರವಾಗಿ ನನ್ನದು ಅಪೂರ್ವವಾದ ಜಾತಿಯೆಂಬುದು ಮನವರಿಕೆಯಾಯಿತು. ಆದಾಗ್ಯೂ ನನ್ನ ಜಾತಿಯ ಮರಗಳು ಈ ಕಾಡಿನಲ್ಲಿ ಇಲ್ಲವೆಂದಾದರೆ ನನ್ನ ತಾಯಿ ಇನ್ನೆಷ್ಟು ದೂರದವಳಿರಬೇಕು ಎಂಬ ಸಂಶಯ ಮತ್ತೆ ನನ್ನನ್ನು ಕಾಡಲಾರಂಭಿಸಿತು. ಇನ್ನೊಬ್ಬ, 'ಬುದ್ಧನಿಗೆ ಜ್ಞಾನೋದಯವಾದ ಬೋಧಿವೃಕ್ಷ ಏನಿದೆಯಲ್ಲ, ಅದು ಇದೇ ಜಾತಿಯದೆ' ಎಂದ. ಹಾಗಾದರೆ ನನ್ನ ಮೂಲ ಎಲ್ಲೆಲ್ಲೋ ಅಡಗಿದೆ ಎಂಬುದಂತೂ ಮನವರಿಕೆಯಾಯಿತು.

ಸುಯ್ಯನೆ ಸುರುಳಿಯಂತೆ ಸುಳಿದಾಡಿಕೊಂಡು ಬಂದ ಸುಳಿಗಾಳಿ ಹೇಳಿತು, ಅವತ್ತು ಆನೆಯನ್ನು ಖೆಡ್ಡಾಕ್ಕೆ ಕೆಡವಿ ಎಳೆದುಕೊಂಡು ಹೋದರಲ್ಲ, ಆ ಮಹಾರಾಜನ ಕಡೆಯವರೇ ಇವರೆಂದು. ಆ ರಾಜನ ಬಳಿ ಹತ್ತು ಸಾವಿರಕ್ಕೂ ಹೆಚ್ಚಿನ ದಷ್ಟಪುಷ್ಟವಾದ ಆನೆಗಳಿವೆಯಂತೆ. ಅವುಗಳಲ್ಲೆಲ್ಲ ಸೌಮ್ಯವಾದ, ಮರಿಯಿದ್ದಾಗಿನಿಂದಲೂ ಮನುಷ್ಯರ ಸಹವಾಸ ಮಾಡಿರುವ ಆನೆಯನ್ನು ಪಟ್ಟದಾನೆಯನ್ನಾಗಿ ಆಯ್ಕೆ ಮಾಡಿಕೊಂಡಿದ್ದರಂತೆ. ಅದರ ಕುತ್ತಿಗೆ ಮೇಲೆ ಕುಳಿತ ಮಾವುತ ತನ್ನ ಕೈಯಲ್ಲಿರುವ ಮಂತ್ರದಂಡದಂಥ ಅಂಕುಶದಿಂದ ಅದನ್ನು ನಿಯಂತ್ರಿಸುತ್ತಾನಂತೆ. ಅದರ ಬೆನ್ನ ಮೇಲೆ ಚಿನ್ನದ ಅಂಬಾರಿಯನ್ನು ಕಟ್ಟಿ, ಅದರ ನೆರಳಲ್ಲಿ ರಾಜಗಾಂಭೀರ್ಯದಿಂದ ಕುಳಿತ ಮಹಾರಾಜ ಸಿಂಹಾವಲೋಕನ ಮಾಡುತ್ತಲೇ ರಾಜ್ಯದ ಎಲ್ಲ ಸ್ಥಿತಿಗತಿಗಳನ್ನೂ ಅರ್ಥ ಮಾಡಿಕೊಂಡುಬಿಡುತ್ತಾನಂತೆ. ಅಷ್ಟು ಬುದ್ಧಿವಂತನಂತೆ ಆತ. ಆತನನ್ನು ಮೀರಿಸುವಂಥ ರಾಜ ಈ ಭೂಮಿಯ ಮೇಲೆಯೇ ಇಲ್ಲವಂತೆ. ಅದೇನು ಗತ್ತು, ಅದೇನು ಗೈರತ್ತು! ಅಷ್ಟೇ ಅಲ್ಲ, ಅದೆಂಥ ಅಂದ ಚೆಂದವಂತೆ. ಅಂಥ ರಾಜಕಳೆ ಹೊಂದಿರುವ ಇನ್ನೊಬ್ಬ ಸ್ಫುರದ್ರೂಪಿಯನ್ನು ಇದುವರೆಗೆ ಯಾರೂ ಕಂಡೇ ಇಲ್ಲವಂತೆ. ಆತನ ಸೊಬಗು, ಸೌಂದರ್ಯವನ್ನು ಲಾವಣಿ ಮಾಡಿ ಹಾಡುತ್ತಾರಂತೆ. ಕೊರಳ ತುಂಬ ಮುತ್ತು ರತ್ನ ಪಚ್ಚೆಗಳಿಂದ ಅಲಂಕೃತವಾದ ಸರಗಳೇ ತುಂಬಿವೆಯಂತೆ. ತಲೆಯ ಮೇಲಿನ ಕಿರೀಟದ ತುಂಬ ಫಳಫಳ ಹೊಳೆವ ವಜ್ರದ ಹರಳುಗಳು, ಅವುಗಳ ಮಧ್ಯೆ ಹಣೆಯ ಮೇಲೆ ಸರಿಯಾಗಿ ಎದ್ದು ಕಾಣುವಂಥ ನೀಲಿ ಮುತ್ತಿನ ನತ್ತು... ತಲೆ ಮೇಲೆ ಅಂಥ ಮಣಭಾರದ ಕಿರೀಟವನ್ನು ಏಕೆ ಹಾಗೆ ಹಾಕಿಕೊಳ್ಳಬೇಕು ಎಂಬ ಸರಳ ಪ್ರಶ್ನೆ ನನ್ನದಾಗಿತ್ತು. ಕಿರೀಟವೆಂಬುದು ಬರಿಯ ಆಭರಣವಲ್ಲವಂತೆ, ಇಡೀ ಭೂಮಂಡಲದ ಸಕಲ ಚರಾಚರ ಮುತ್ತುರತ್ನಗಳನ್ನೆಲ್ಲ ತಲೆಯ ಮೇಲೆ ಹೊತ್ತು ಸಂರಕ್ಷಿಸುವ ಜವಾಬ್ದಾರಿಯ ಸಂಕೇತವಂತೆ ಅದು. ಆದರೂ ಮಂದಸ್ಮಿತ ಮುಖ. ಅಂಥ ಸ್ನಿಗ್ಧ ಸೌಂದರ್ಯ ಕೇವಲ ಸಾಮಾನ್ಯ ಮನುಷ್ಯರಿಗೆ ಅಸಾಧ್ಯವಂತೆ. ಆದಾಗ್ಯೂ ಅಂಥ ದೈವಾಂಶಸಂಭೂತನಿಗೂ ನಿಯಂತ್ರಿಸಲಾಗದ ಪರರಾಜ್ಯದ ವೈರಿ ರಾಜರುಗಳು, ಅವರಿಗೆ ಆಂತರಿಕ ವಿಚಾರಗಳನ್ನು ತಲುಪಿಸುವ ಗೂಢಚಾರರು, ವಿಷಕನ್ಯೆಯರು, ಕಳ್ಳಕಾಕರು, ದರೋಡೆಕೋರರು, ಮೋಸಗಾರರು, ವಂಚಕರು, ಕಪಟಿಗಳು... ಹೀಗೆ ಎಷ್ಟೆಲ್ಲ ನೀಚ ಸ್ವಭಾವದ ಮನುಷ್ಯರಿದ್ದಾರಂತೆ. ಅಂಥ ಗಜಗಾತ್ರದ ಮದಗಜಗಳನ್ನೂ ಪಳಗಿಸಿ ತನ್ನ ಆಣತಿಯಂತೆ ನಡೆಸಿಕೊಳ್ಳಬಲ್ಲಂಥ ಮನುಷ್ಯ, ಯಃಕಶ್ಚಿತ್ ತನ್ನಂಥದೇ ಮನುಷ್ಯನ ಗುಣಸ್ವಭಾವವನ್ನು ಅರಿಯಲು, ನಿಯಂತ್ರಿಸಲು ವಿಫಲನಾಗುತ್ತಾನಲ್ಲ! ಎಂಥ ವಿಪರ್ಯಾಸ...

ಅಂಥ ಆ ಮಹಾರಾಜನ ಐಭೋಗ, ವೈಭೋಗಗಳನ್ನೆಲ್ಲ ಒಮ್ಮೆ ಹೋಗಿ ನೋಡಿಕೊಂಡು ಬಂದುಬಿಡಬೇಕು ಅನ್ನಿಸುತ್ತಿತ್ತು. ಆದರೆ ಏನು ಮಾಡಲಿ, ನನ್ನ ಬೇರುಗಳು ನನ್ನನ್ನು ಅಲುಗಾಡದಂತೆ ಇನ್ನಷ್ಟು ಮತ್ತಷ್ಟು ಬಿಗಿಯಾಗಿ ಕಟ್ಟಿಹಾಕಿಬಿಟ್ಟಿವೆಯಲ್ಲ!

ಕೊಂಬೆ–4

ಅವರವರೇ ಮಾತಾಡುತ್ತಿದ್ದುದನ್ನು ಕೇಳಿಸಿಕೊಳ್ಳುತ್ತಿದ್ದೆ. ಅದರಿಂದಲೇ ಅಜಮಾಸು ಒಂದು ಕಲ್ಪನೆ ಬಂದುಬಿಡುವಂತಿತ್ತು. ಆ ಸಾಮ್ರಾಜ್ಯದ ಹೆಸರು ವಿಜಯನಗರವಂತೆ. ಆ ಚಕ್ರವರ್ತಿಯ ಹೆಸರು ಕೃಷ್ಣದೇವರಾಯನಂತೆ. ಇತ್ತ ನನ್ನ ಕಡೆಯಂತೆ ದಟ್ಟ ಮಲೆನಾಡೂ ಅಲ್ಲದ, ಅತ್ತ ಸಂಪೂರ್ಣ ಬಯಲುಸೀಮೆಯೂ ಅಲ್ಲದ ಸಮ್ಮಿಶ್ರಣವಾದ ಸಮನ್ವಯಿತ ಪ್ರದೇಶವಂತೆ ಅದು. ರಾಜಧಾನಿಯ ರಕ್ಷಣೆಗಾಗಿ ಸುತ್ತಲೂ ಗುಡ್ಡಗಳಿಂದ ಆವೃತ್ತವಾದ ಆದರೆ ದುರ್ಗಮವಲ್ಲದ ಸಮತಟ್ಟಾದ ಪ್ರದೇಶವನ್ನು ಒಳಗೊಂಡಂಥ ಊರಂತೆ ಅದು. ಅಲ್ಲಲ್ಲಿ ಡೈನೋಸಾರಿನ ಬೆನ್ನಮೂಳೆಗಳಂತೆ ಉರುಟುರುಟಾಗಿ ಉಬ್ಬಿ ಕೊಂಡಿದ್ದ ಬೆಟ್ಟಗಳು, ಅವುಗಳ ಮಧ್ಯೆಯೂ ತೂರಿ ಬೆಳೆದಿರುವ ತುಂಗಭದ್ರೆಯ ನೀರುಂಡ ಹಸಿರು ಕಗ್ಗಾಡು...

ಅರೇ, ಅಂಥದೇ ಪಂಚವರ್ಣೆಯ ನೀರನ್ನೇ ತಾನೇ ನಾನೂ ಕುಡಿಯುತ್ತಿರುವುದು! ಈ ನದಿಯ ನೀರು ಎಷ್ಟೊಂದು ಸಿಹಿ ಎಂದರೆ ಬೇಸಿಗೆಯಲ್ಲಿ ಬಾಯಾರಿಕೆಗೆ ಬೆಲ್ಲದ ಉಂಡೆಯೇ ಬೇಕಿಲ್ಲವಂತೆ. ಗಂಗಾನದಿಯ ಸ್ನಾನ ಪಂಚವರ್ಣೆಯ ಪಾನ ಎಂಬ ನಾಣ್ನುಡಿ ಇಲ್ಲಿ ಪ್ರಸಿದ್ಧವಾದದ್ದು. ಸ್ನಾನಕ್ಕೆ ಗಂಗೆ ಎಷ್ಟು ಪವಿತ್ರವೋ ಕುಡಿಯಲು ಪಂಚವರ್ಣೆ ಅಷ್ಟೇ ಪ್ರಖ್ಯಾತವಾದದ್ದಂತೆ. ಗಂಗೆ ಲಕ್ಷಾಂತರ ಜನರ ಗಲೀಜನ್ನು ಹೊತ್ತು ಸಾಗುವ ಹಿನ್ನೆಲೆಯಲ್ಲಿ, ಗಂಗೆಯ ನೀರು ಸ್ನಾನಕ್ಕೂ ಪಾನಕ್ಕೂ ಶುದ್ಧವಾಗಿ ಉಳಿದಿಲ್ಲ. ಸಾಯುವವರ ಬಾಯಿಗೆ ಗಂಗಾ ನೀರನ್ನು ಬಿಟ್ಟರೆ ಇನ್ನಷ್ಟು ಬೇಗ ಸಾಯಿಸಬಹುದೆಂಬ ಕುಹಕವೂ ಪ್ರಚಲಿತದಲ್ಲಿದೆ. ಆದರೆ ಪಂಚವರ್ಣೆ ಹಾಗಲ್ಲ. ಸ್ನಾನ–ಪಾನ ಎರಡಕ್ಕೂ ಶುಭ್ರಳೇ. ಈ ನೀರಿನಲ್ಲಿ ಪಂಚಾಮೃತದ ಗುಣವಿಶೇಷಗಳಿರುವುದರಿಂದಲೇ ಅದಕ್ಕೆ ಪಂಚವರ್ಣೆ ಎಂದು ಹೆಸರಿಟ್ಟುಬಿಟ್ಟಿದ್ದಾರೆ. ಆ ನೀರಿನಲ್ಲಿ ಈಜಾಡಿದರೆ ಕಾಡಿನೆಲ್ಲ ಜಾತಿಯ ನಮ್ಮಂಥ ಗಿಡಮರಗಳ ಬೇರಿನಿಂದ ಕರಗಿಕೊಂಡು ಬಂದ ಸಾವಯವ ಗುಣದಿಂದಾಗಿ ಆಯುರ್ವೇದ ಚಿಕಿತ್ಸೆಯಂತೆ ಚರ್ಮ ರೋಗಗಳೆಲ್ಲ ವಾಸಿಯಾಗಿಬಿಡುತ್ತವಂತೆ. ಇನ್ನು ಆ ಮೈಯ, ತಲೆಗೂದಲ ನುಣುಪು ಎಷ್ಟಿರುತ್ತದೆಂದರೆ ಮೀನಿನ ಮೈಯಂತೆ ಜಾರುತ್ತಿರುತ್ತದಂತೆ. ಅಷ್ಟು ಮೃದುವಾದ, ಸಿಹಿಯಾದ ನೀರಂತೆ ಅದು. ಅಂತೆ ಏನು? ನಾನೇ ಅದರ ಜೀವಾಮೃತವನ್ನು ದಿನವೂ ಹೀರಿಕೊಳ್ಳುತ್ತಿದ್ದೇನಲ್ಲ! ಗಡುಸಾದ ಉಪ್ಪು ನೀರನ್ನು ಕುಡಿದು ಅನುಭವವಿಲ್ಲದುದರಿಂದ ಬಹುಶಃ ಆ